# ಕ್ರಿಕೆಟ್ ದಿಗ್ಗಜರ ಜೊತೆ ಚರ್ಚಿಸಿದ್ದೇನೆ

**ರೀನಾ ಡಿಸೋಜಾ**
ಕಲರ್ಸ್ ಕನ್ನಡದ
ಗಿಚ್ಚಿ–ಗಿಲಿಗಿಲಿ
ನಿರೂಪಕಿ



◆ **ಕಾರ್ಯಕ್ರಮದ ಸ್ವರೂಪ ಹೇಗಿರುತ್ತದೆ?**

ಇದು ಕಾಮಿಡಿ ಆಧಾರಿತ ರಿಯಾಲಿಟಿ ಶೋ. ಹತ್ತು ಜೋಡಿ ಸ್ಪರ್ಧೆಯಲ್ಲಿ ಇರುತ್ತಾರೆ. ಶ್ರೀಸಾಮಾನ್ಯರೂ ಸೇರಿ ಬೇರೆ ಬೇರೆ ಕ್ಷೇತ್ರದ ಪರಿಣಿತರು ಇದರ ಭಾಗವಾಗಲಿದ್ದಾರೆ. ವಾರಾಂತ್ಯದಲ್ಲಿ ಈ ಕಾರ್ಯಕ್ರಮ ಪ್ರಸಾರವಾಗುತ್ತದೆ. ನಾಲ್ಕು ತಿಂಗಳ ಕಾಲ ಸ್ಪರ್ಧೆ ನಡೆಯುತ್ತದೆ. ನಾನು ಮತ್ತು ಮಂಜು ಪಾವಗಡ ಇದನ್ನು ನಿರೂಪಿಸುತ್ತಿದ್ದೇವೆ.

◆ **ಕ್ರೀಡೆಯಿಂದ ಹಾಸ್ಯಕ್ಕೆ ರೂಪಾಂತರ ಹೇಗೆನಿಸುತ್ತಿದೆ?**

ಕ್ರೀಡೆಯಲ್ಲಿ ವಿಶ್ಲೇಷಣೆಯ ಜೊತೆ ವಿವರಣೆಯನ್ನು ನೀಡುತ್ತೇವೆ. ಆಟದ ಬಗ್ಗೆ ಮಾಹಿತಿಯನ್ನು ಒದಗಿಸುವುದು ಅಗತ್ಯ ಕೆಲಸ. ಇಲ್ಲಿ ಮನೋರಂಜನೆ ಮತ್ತು ತಮಾಷೆ ಕೇಂದ್ರಿತವಾಗಿ ಮಾತನಾಡುತ್ತೇವೆ. ಸ್ಪರ್ಧಿಗಳ ಜೊತೆ ಸಮಾಲೋಚನೆ, ಅವರ ಪ್ರದರ್ಶನದ ಬಗ್ಗೆ ಮಾತುಕತೆ ಇರುತ್ತದೆ. ಸ್ಪರ್ಧಿಗಳೂ ಸೇರಿ ವೀಕ್ಷಕರಿಗೆ ಖುಷಿ ಕೊಡುವಂತೆ ನಮ್ಮ ಮಾತಿರುತ್ತದೆ. ಇಲ್ಲಿ ಜ್ಞಾನಾಧಾರಿತ ಮಾಹಿತಿಯನ್ನು ನೀಡುವ ಉದ್ದೇಶ ಇರಲ್ಲ. ಎರಡರಲ್ಲಿ ತುಂಬ ವ್ಯತ್ಯಾಸ ಇದೆ.

◆ **ನಿರೂಪಣೆಯ ಜನಪ್ರಿಯತೆಯ ಅನುಭವ ಹೇಳಿ.**

2018ರಲ್ಲಿ ಸ್ಟಾರ್ ಸ್ಪೋರ್ಟ್ಸ್ ಸೇರಿದೆ. ಅವತ್ತಿನಿಂದ ಕ್ರೀಡಾ ನಿರೂಪಕಿಯಾಗಿ ಐಪಿಎಲ್, ಕಬಡ್ಡಿ, ಫುಟ್‌ಬಾಲ್ ಸ್ಪರ್ಧೆಯ ನಿರೂಪಣೆ ಮಾಡಿದ್ದೇನೆ. ಅಲ್ಲಲ್ಲಿ ಕೆಲವರು ಮಾತನಾಡಿಸುತ್ತಾರೆ. ನನ್ನ ನಿರೂಪಣೆಯ ಬಗ್ಗೆ ಪ್ರಶಂಸಿಸುತ್ತಾರೆ. ಅಲ್ಲೇ ಕ್ರೀಡಾ ವಿಶ್ಲೇಷಣೆಯ ವೀಕ್ಷಕ ವಿಮರ್ಶೆ ಕೂಡ ಸಿಗುತ್ತದೆ. ಅದಕ್ಕಿಂತ ಅಮೋಘ ಮತ್ತು ಮಹತ್ವ ಅನಿಸಿದ್ದು, ಭಾರತ ಕ್ರಿಕೆಟ್ ತಂಡವನ್ನು ಪ್ರತಿನಿಧಿಸಿದ್ದ ದಿಗ್ಗಜರ ಜೊತೆ ಕುಳಿತು ಚರ್ಚಿಸಿದ ಸಂಗತಿ. ಅವರ ಜೊತೆ ಕಲಿಯಲು ಸಾಕಷ್ಟು ಅವಕಾಶ ಸಿಕ್ಕಿದೆ. ಹರ್ಭಜನ್ ಸಿಂಗ್, ಇರ್ಫಾನ್ ಪಠಾಣ್, ಸುರೇಶ್ ರೈನಾ ಸೇರಿ ಅನೇಕರನ್ನು ಭೇಟಿಯಾಗಿದ್ದೇನೆ. ಅವರು ವಿವಿಧ ಮ್ಯಾಚ್‌ಗಳ ಸವಾಲು, ಎದುರಾಳಿ ತಂಡ ಮತ್ತು ಸಹ ಆಟಗಾರರ ಬಗ್ಗೆಯೂ ಹೇಳಿದ್ದಾರೆ. ಕ್ರಿಕೆಟ್ ಈಗ ಯಾವ ರೀತಿಯಲ್ಲಿ ಬದಲಾಗಿದೆ ಎನ್ನುವುದನ್ನು ತಿಳಿದುಕೊಳ್ಳಲು ಅನುಕೂಲವಾಗಿದೆ.

◆ **ನಿರೂಪಣೆಯನ್ನು ಹೇಗೆ ವಿಸ್ತರಿಸಿಕೊಂಡಿದ್ದೀರಿ?**

ಎಂಟನೇ ತರಗತಿಯಲ್ಲಿ ಇದ್ದಾಗ ಒಂದು ಕಾರ್ಯಕ್ರಮವನ್ನು ನೋಡುತ್ತಿದ್ದೆ. ಅದೂ ಕೋಸ್ಟಲ್ ಕರ್ನಾಟಕದ ಸ್ಥಳೀಯ ವಾಹಿನಿ. ಆಗ ಅಮ್ಮನಿಗೆ ಈ ಕಾರ್ಯಕ್ರಮವನ್ನು ನಾನೂ ನಿರೂಪಿಸುತ್ತೇನೆ ಎಂದಿದ್ದೆ. ಅದಾಗಿ ಐದು ವರ್ಷಗಳ ಬಳಿಕ ನನಗೊಂದು ಅವಕಾಶ ಅದೇ ವಾಹಿನಿಯಲ್ಲಿ ಸಿಕ್ಕಿತು. ಸಾಕಷ್ಟು ವೇದಿಕೆಗಳಲ್ಲಿ ಅವಕಾಶಗಳು ಸಿಕ್ಕಿವೆ.

ಕ್ರಿಕೆಟ್ ಬಗ್ಗೆ ಆನ್‌ಲೈನ್‌ನಲ್ಲಿ ಸಾಕಷ್ಟು ಮಾಹಿತಿ ಸಿಗುತ್ತದೆ ಅದನ್ನು ಹುಡುಕಿ ಓದುತ್ತೇನೆ. ಕನ್ನಡ ಇಂಗ್ಲಿಷ್ ದಿನ ಪತ್ರಿಕೆಗಳನ್ನು ನಿತ್ಯ ಓದುತ್ತೇನೆ. ತಂಡಗಳ ಕುರಿತು ಪಂದ್ಯಗಳ ಕುರಿತು ಮಾಹಿತಿ ಇರುವ ಮ್ಯಾಗಜಿನ್ ನೋಡುತ್ತೇನೆ. ಕ್ರಿಕೆಟ್ ಪಂದ್ಯಗಳಿಗೆ ಸಂಬಂಧಿಸಿದಂತೆ ಪ್ರಕಟಿಸುವ ಡಾಕೆಟ್ಸ್ (ಡಾಕ್ಯುಮೆಂಟೇಶನ್ ಅಂಡ್ ರಿಜಿಸ್ಟ್ರೇಷನ್ ಮ್ಯಾಚ್) ಓದುತ್ತೇನೆ. ಕನಿಷ್ಠ ಮೂರುಗಂಟೆ ತಯಾರಿ ಮಾಡಿಕೊಳ್ಳುತ್ತೇನೆ. ವಿಷಯ ಪರಿಣಿತರೇ ಚರ್ಚಿಸಲು ಬಂದಿರುತ್ತಾರೆ. ಅವರಷ್ಟು ತಿಳಿವಳಿಕೆ ಇಲ್ಲದಿದ್ದರೂ ಸ್ವಲ್ಪ ಮಾಹಿತಿಯನ್ನು ಪಡೆಯಲು ಹೋಂವರ್ಕ್ ಅನಿವಾರ್ಯ. ಸೆಲೆಬ್ರಿಟಿಗಳ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತೇನೆ. ಕನ್ನಡ ಸಿನಿಮಾ ಮತ್ತು ಸಂಗೀತದ ಬಗ್ಗೆ ಸ್ವಲ್ಪ ಗೊತ್ತಿದೆ. ಈಗಾಗಲೇ ‘ಗಿಚ್ಚಿ–ಗಿಲಿಗಿಲಿ’ ತಯಾರಿ ಮಾಡಿಕೊಳ್ಳುತ್ತಿದ್ದೇನೆ. ನಿರೂಪಣೆ ಹೊಸತಲ್ಲ ಹತ್ತು ವರ್ಷದಿಂದ ಮಾಡುತ್ತಿದ್ದೇನೆ. ಆದರೆ ಪ್ರತಿ ಕಾರ್ಯಕ್ರಮವೂ ಹೊಸತು. ಅದಕ್ಕೆ ತಯಾರಿ ಮಾಡಿಕೊಳ್ಳಲೇಬೇಕು. ಆ ತಳಪಾಯದ ಮೇಲೆಯೇ ಕಾರ್ಯಕ್ರಮ ನಿಲ್ಲುತ್ತದೆ.

◆ **ನಿಮ್ಮ ಹಾಗೆಯೇ ಬೆಳೆಯಬೇಕು ಟಿಪ್ಸ್ ಕೊಡಿ ಎಂದರೆ**

ನನ್ನ ರೀತಿ ಮಾತ್ರ ಅಲ್ಲ, ನನಗಿಂತ ದೊಡ್ಡದಾಗಿ ಬೆಳೆಯಲಿ ಎಂದು ಆಶಿಸುತ್ತೇನೆ. ಆ್ಯಂಕರ್ ಆಗಬೇಕು ಅಂದರೆ ಮೊದಲು ಯಾವ ಭಾಷೆಯಲ್ಲಿ ನಿರೂಪಣೆ ಮಾಡಬೇಕು ಎಂದು ನಿರ್ಧರಿಸಬೇಕು. ಆ ನಂತರ ಸ್ಥಳೀಯ ವಾಹಿನಿ, ರೇಡಿಯೊ ಅಥವಾ ಸಣ್ಣಪುಟ್ಟ ಕಾರ್ಯಕ್ರಮಗಳಲ್ಲಿ ಅವಕಾಶಗಳನ್ನು ಕೇಳಿ ಪಡೆಯಬೇಕು. ಎಲ್ಲದಕ್ಕಿಂತ ಪ್ರಯತ್ನ ಅತ್ಯಂತ ಮುಖ್ಯ. ಪ್ರೇಕ್ಷಕರ ಎದುರು ನಿರೂಪಿಸುವ ಮಜಾವೇ ಬೇರೆ. ಭಾಷೆಯನ್ನು ಸ್ಪಷ್ಟ ಶುದ್ಧವಾಗಿ ಕಲಿಯಬೇಕು. ನಮ್ಮ ಭಾಷೆಯನ್ನು ನಾವೇ ಬೆಳೆಸಿಕೊಳ್ಳಬೇಕು. ವರ್ತಮಾನದ ಆಗು ಹೋಗುಗಳನ್ನು ತಿಳಿದುಕೊಳ್ಳಬೇಕು. ಮಾತನಾಡಲು ಕೆಲವೊಂದು ಸಂಗತಿಗಳು ಸರಕಾಗಿ ನೆರವಿಗೆ ಬರುತ್ತವೆ. ಮಾತಿನ ಮೂಲಕ ವರ್ತಮಾನವನ್ನು ಕನೆಕ್ಟ್ ಮಾಡಬೇಕು.

◆ **ನಿಮ್ಮ ಬಗ್ಗೆ ಹೇಳುವುದಾದರೆ...**

ಹುಟ್ಟಿ ಬೆಳೆದಿದ್ದು ಮೂಡುಬಿದರೆ. ಅಲ್ಲೇ ಶಾಲೆ ಕಲಿತೆ. ಆಳ್ವಾಸ್‌ನಲ್ಲಿ ಪಿಯು ಮಾಡಿದೆ. ಕಂಪ್ಯೂಟರ್ ಸೈನ್ಸ್‌ನಲ್ಲಿ ಎಂಜಿನಿಯರಿಂಗ್ ಮಾಡಿದೆ. ಆಗಲೇ ಸ್ಥಳೀಯ ಟೀವಿಯಲ್ಲಿ ನಿರೂಪಣೆಯನ್ನು ಆರಂಭಿಸಿದೆ. ಬೆಂಗಳೂರಿಗೆ ಬಂದ ಮೇಲೆ ಐಬಿಎಂ, ಅಮೆಜಾನ್‌ನಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡಿದ್ದೇನೆ. ನನ್ನ ತಾಯಿ ಸ್ಟಾಫ್‌ನರ್ಸ್ ಆಗಿದ್ದರು. ತಂದೆ ನಿವೃತ್ತ ಬ್ಯಾಂಕ್ ಅಧಿಕಾರಿ. ಅಕ್ಕ–ಭಾವ ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಾರೆ. ನಮ್ಮದು ಪುಟ್ಟ ಮಧ್ಯಮ ವರ್ಗದ ಕುಟುಂಬ. ಅಕ್ಕ ಮತ್ತು ನನ್ನನ್ನು ಅಮ್ಮನೇ ಬೆಳೆಸಿದ್ದು, ಅವರೇ ನನಗೆ ಸ್ಫೂರ್ತಿ. ತಂದೆ–ತಾಯಿ ಆಸೆಯನ್ನು ಮಕ್ಕಳು ಪೂರೈಸುತ್ತಾರೆ ಎಂದು ಕೆಲವರು ಹೇಳುತ್ತಾರೆ. ನನ್ನ ತಂದೆ ಗಾಯನದಲ್ಲಿ ದೊಡ್ಡದೇನೋ ಮಾಡಬೇಕು ಎನ್ನುವ ಆಸೆ ಇತ್ತಂತೆ ಅವರಿಗೆ ಸಾಧ್ಯವಾಗಿಲ್ಲ. ಅದು ಎಲ್ಲೋ ನನ್ನ ಮೂಲಕ ಸಫಲ ಆಗಬಹುದು.

■ **ರಾಘವೇಂದ್ರ ಕೆ.**